



ಹರಿಪ್ರಿಯಾ

ದೀಪಾ ಸನ್ನಿಧಿ

ರೂಪದಲ್ಲೂ ಪರಿಣಮಿಸಿತು. ಕನ್ನಡ ಚಿತ್ರರಂಗ ತನ್ನ ಆರಂಭದ ದಿನಗಳಿಂದಲೂ ಸ್ತ್ರೀಪ್ರಧಾನ ಕಥನಗಳಿಗೆ ಹೆಚ್ಚು ಒತ್ತು ನೀಡಿರುವುದು ಗಮನಾರ್ಹ. ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' (1934) ನಾಯಕಿ ಪ್ರಧಾನ ಕಥೆಯನ್ನು ಒಳಗೊಂಡಿತ್ತು. ರಾವಣ ಪುತ್ರ ಇಂದ್ರಜಿತ್‌ನ ಪತ್ನಿ ಸುಲೋಚನೆಯ ಬದುಕಿನ ದುರಂತ ಹಾಗೂ ಆಕೆಯ ಪಾತಿವ್ರತ್ಯವನ್ನು ಸಾರುವ ಕಥೆಯ ಚಿತ್ರವದು. ಸಿನಿಮಾದ ಕೇಂದ್ರದಲ್ಲಿ ನಾಯಕನಿರುವ ಸಂದರ್ಭದಲ್ಲೂ ನಾಯಕಿಯ ಪಾತ್ರಕ್ಕೆ ಸಾಕಷ್ಟು ಅವಕಾಶವಿರುವ ಚಿತ್ರಗಳು ರೂಪುಗೊಳ್ಳುತ್ತಿದ್ದವು. ಅಲ್ಲಿಂದ ಆರಂಭವಾದ ಸ್ತ್ರೀಸಖ್ಯವನ್ನು ಎಂಬತ್ತರ ದಶಕದವರೆಗೂ ಗಮನಿಸಬಹುದು.

ಎಂಬತ್ತರ ದಶಕದ ನಂತರ ಕನ್ನಡ ಚಿತ್ರರಂಗ ಒಮ್ಮಿಂದೊಮ್ಮೆಗೇ ಸಂಪೂರ್ಣವಾಗಿ ನಾಯಕಕೇಂದ್ರಿತವಾಗಿ ಬದಲಾಯಿತು. ಕೌಟುಂಬಿಕ ಚಿತ್ರಗಳು ಕೂಡ ಕಡಿಮೆಯಾಗತೊಡಗಿದವು. ತಾರಾ, ಶ್ರುತಿ, ಸುಧಾರಾಣಿ, ಭಾವನಾರಂಥ ಕನ್ನಡತಿಯರು ಹಾಗೂ ತೆಲುಗಿನಿಂದ ಬಂದು ಕನ್ನಡತಿಯೇ ಆದ ಮಾಲಾಶ್ರೀ ಉದಾಹರಣೆಯನ್ನು ಹೊರತುಪಡಿಸಿದರೆ ಸಾಕಷ್ಟು ಕಾಲ ಉಳಿದ ನಟಿಯರು ಕಡಿಮೆ. ಕಳೆದ ಒಂದು ದಶಕದ ಅವಧಿಯಲ್ಲಂತೂ – ನಾಯಕಿಪ್ರಧಾನ ಸಿನಿಮಾ ಬಗ್ಗೆ ಯೋಚಿಸುತ್ತಿದ್ದ ನಿರ್ದೇಶಕರು ನೆನಪಿಸಿಕೊಳ್ಳುತ್ತಿದ್ದ ಏಕೈಕ ಹೆಸರು ರಾಧಿಕಾ ಪಂಡಿತ್.

## ಚೆಲುವಯ್ಯ ಚೆಲುವು...

ಕಳೆದ ಎರಡು ಮೂರು ವರ್ಷಗಳಲ್ಲಿ ಕನ್ನಡ ಚಿತ್ರರಂಗ ಸಾಕಷ್ಟು ಹೊಸ ನಾಯಕಿಯರನ್ನು ಕಂಡಿದೆ. ನಾಡಿನ ವಿವಿಧ ಭಾಗಗಳ ಪ್ರತಿಭಾವಂತೆಯರು ನಟಿಯರಾಗಿ ತಮ್ಮ ಚಹರೆ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಸಂದರ್ಭ ಇಂದಿನದು. ಸುಮ್ಮನೆ ನೆನಪಿಸಿಕೊಳ್ಳಿ: ಶ್ರುತಿ ಹರಿಹರನ್, ಶ್ರದ್ಧಾ ಶ್ರೀನಾಥ್, ಸುಕೃತಾ ವಾಗ್ಲೆ, ಶ್ವೇತಾ ಶ್ರೀವಾಸ್ತವ್, ನಿವೇದಿತಾ, ರಶ್ಮಿಕಾ ಮಂದಣ್ಣ, ರಾಧಿಕಾ ಚೇತನ್, ಸೋನು, ಹರಿಪ್ರಿಯಾ, ಮಾನ್ವಿತಾ, ಸಂಯುಕ್ತಾ ಹೊರನಾಡು, ಸಿಂಧು ಲೋಕನಾಥ್ – ಎಷ್ಟೊಂದು ಹೆಸರುಗಳು ಸುಳಿದುಹೋಗುತ್ತವೆ. ಕನ್ನಡ ಮಾತನಾಡಬಲ್ಲ, ಕನ್ನಡದ ಸೊಗಡನ್ನು ಬಲ್ಲ ಈ ಹುಡುಗಿಯರು ಗ್ಲಾಮರ್ ಮಾತ್ರವಲ್ಲ, ಪ್ರತಿಭೆಯಿಂದಲೂ ಗಮನಸೆಳೆದಿರುವ ತಾರಾಮಣಿಗಳು.

ಶ್ರುತಿ ಹರಿಹರನ್ ಅವರನ್ನೇ ನೋಡಿ. 'ಬ್ಯೂಟಿಫುಲ್ ಮನಸುಗಳು' ಚಿತ್ರದ ಅಭಿನಯಕ್ಕಾಗಿ 2016ರ ಅತ್ಯುತ್ತಮ ನಟಿ ರಾಜ್ಯಪ್ರಶಸ್ತಿ ಪಡೆದ ಅಗ್ಗಳಿಕೆಯ ಈ ನಟಿ, ರಾಧಿಕಾ ಪಂಡಿತ್‌ರ ವಾರಸುದಾರಳಂತೆ ಕಾಣಿಸುತ್ತಿದ್ದಾರೆ. ಪವನ್ ಕುಮಾರ್ ನಿರ್ದೇಶನದ 'ಲೂಸಿಯಾ' ಚಿತ್ರದ ಮೂಲಕ ನಾಯಕಿಯಾಗಿ ಚಿತ್ರರಂಗ ಪ್ರವೇಶಿಸಿದ ಶ್ರುತಿ ನಟನೆಯ ಜೊತೆಗೆ ತಮ್ಮ ಸೂಕ್ಷ್ಮ ಸಂವೇದನೆ ಹಾಗೂ ಅಭಿರುಚಿಯಿಂದಲೂ 'ಜಾಣೆ'